# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಸ್ಥಳಾಂತರಿಸಿ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 204 ಎಂಡಿಎಸ್ 2017, ದಿನಾಂಕ: 20-06-2017.
2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 271 ಎಂಡಿಎಸ್ 2018, ದಿನಾಂಕ: 25-04-2018.
3. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಏಕಕಡತ ಪ್ರಸ್ತಾವನೆ ಸಂಖ್ಯೆ:ಅಸಂನಿ/ಮೌ.ಆ.ಮಾ.ಶಾ/ಸ್ಥಳಾಂತರ/ಸಿಆರ್-05/2020-21, ದಿನಾಂಕ:24-08-2020.

<><><>

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ ಮಂಜೂರಾದ 200 ಮೌಲಾನಾ ಅಜಾದ್ ಮಾದರಿ ಶಾಲೆಗಳಲ್ಲಿ ಈ ಕೆಳಕಂಡ 08 ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಜನಪ್ರತಿನಿಧಿಗಳ ಬೇಡಿಕೆ, ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಇವರ ಕೋರಿಕೆಯಂತೆ ಶೈಕ್ಷಣಿಕ ಹಿತದೃಷ್ಠಿಯಿಂದ ವರ್ಷದ ಪ್ರಾರಂಭದಲ್ಲಿ ಬೇಡಿಕೆ ಇರುವ ಸ್ಥಳಗಳಲ್ಲಿ ಪ್ರಾರಂಭಿಸಲು ಮೇಲೆ ಓದಲಾದ ಕ್ರಮಸಂಖ್ಯೆ (3)ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರು ಏಕಕಡತ ಪದ್ದತಿಯನ್ವಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

## ಸ್ಥಳಾಂತರಿಸಬೇಕಾದ ಮೌಲಾನಾ ಆಜಾದ್ ಮಾದರಿ ಶಾಲೆಗಳ ವಿವರ

| ಕ್ರ. ಸಂ | ಜಿಲ್ಲೆ | ಹಾಲಿ ಮಂಜೂರಾಗಿರುವ ಸ್ಥಳ | ಶಾಲೆಯ ಹೆಸರು | ಸ್ಥಳಾಂತರಿಸಬೇಕಾದ ಸ್ಥಳ | ಮಂಜೂರಾತಿ ಸಂಖ್ಯೆ |
|---|---|---|---|---|---|
| 1 | ಉಡುಪಿ | ಉಡುಪಿ ನಗರ | ಮೌಲಾನಾ ಆಜಾದ್ ಮಾದರಿ ಶಾಲೆ, ಉಡುಪಿ ನಗರ. | ಕಾರ್ಕಳ ತಾಲ್ಲೂಕು | 300 |
| 2 | ಕಲಬುರಗಿ | ಸೇಡಂ ತಾ॥.ಮುಧೋಳ | ಮೌಲಾನಾ ಆಜಾದ್ ಮಾದರಿ, ಶಾಲೆ, ಮುಧೋಳ್ | ಸೇಡಂ ತಾ॥, ಮಲಖೇಡ | 300 |
| 3 | ಬೆಂಗಳೂರು ನಗರ | ದಕ್ಷಿಣ ವಲಯ-3 | ಮೌಲಾನಾ ಆಜಾದ್ ಮಾದರಿ ಶಾಲೆ, ಮಡಿವಾಳ, ಬೆಂಗಳೂರು. | ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಪರಂಗಿಪಾಳ್ಯ, ದಕ್ಷಿಣ ವಲಯ-3, ಬೆಂಗಳೂರು. | 300 |
| 4 | | ಉತ್ತರವಲಯ-3 | ಮೌಲಾನಾ ಆಜಾದ್ ಮಾದರಿ ಶಾಲೆ, ತಿಮ್ಮಯ್ಯ ರಸ್ತೆ, ಬೆಂಗಳೂರು. | ಶೇಷಾದ್ರಿಪುರಂ, ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸುವುದು ಮಾಡಲು ಕೋರಿದೆ | 300 |

...............2

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:MWD 359 MDS 2020, ಬೆಂಗಳೂರು,ದಿನಾಂಕ:28-09-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿನಿಂದ 'ಈ ಕೆಳಕಂಡಂತೆ ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಶೈಕ್ಷಣಿಕ ಹಿತದೃಷ್ಠಿಯಿಂದ ಬೇಡಿಕೆ ಇರುವ ಸ್ಥಳಗಳಿಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

**ಮೌಲಾನಾ ಅಜಾದ್ ಮಾದರಿ ಶಾಲೆಗಳ ವಿವರ.**

| ಕ್ರ.ಸಂ | ಜಿಲ್ಲೆ | ಹಾಲಿ ಮಂಜೂರಾಗಿರುವ ಸ್ಥಳ | ಶಾಲೆಯ ಹೆಸರು | ಸ್ಥಳಾಂತರಿಸಬೇಕಾದ ಸ್ಥಳ | ಮಂಜೂರಾತಿ ಸಂಖ್ಯೆ |
|---|---|---|---|---|---|
| 1 | ಉಡುಪಿ | ಉಡುಪಿ ನಗರ | ಮೌಲಾನಾ ಆಜಾದ್ ಮಾದರಿ ಶಾಲೆ, ಉಡುಪಿ ನಗರ. | ಕಾರ್ಕಳ ತಾಲ್ಲೂಕು | 300 |
| 2 | ಕಲಬುರಗಿ | ಸೇಡಂ ತಾ॥.ಮುಧೋಳ | ಮೌಲಾನಾ ಆಜಾದ್ ಮಾದರಿ. ಶಾಲೆ. ಮುಧೋಳ್ . | ಸೇಡಂ ತಾಲ್ಲೂಕು. ಮಲಖೇಡ | 300 |
| 3 | ಬೆಂಗಳೂರು ನಗರ | ದಕ್ಷಿಣ ವಲಯ-3 | ಮೌಲಾನಾ ಆಜಾದ್ ಮಾದರಿ ಶಾಲೆ ಮಡಿವಾಳ, ಬೆಂಗಳೂರು | ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಪರಂಗಿಪಾಳ್ಯ, ದಕ್ಷಿಣ ವಲಯ-3, ಬೆಂಗಳೂರು. | 300 |
| 4 | | ಉತ್ತರವಲಯ-3 | ಮೌಲಾನಾ ಆಜಾದ್ ಮಾದರಿ ಶಾಲೆ. ತಿಮ್ಮಯ್ಯ ರಸ್ತೆ. ಬೆಂಗಳೂರು. | ಬೆಂಗಳೂರು ನಗರದ ಶೇಷಾದ್ರಿಪುರಂ, ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸುವುದು. | 300 |

ಇದಕ್ಕೆ ತಗಲುವ ವೆಚ್ಚವನ್ನು 2020-21ನೇ ಸಾಲಿನಲ್ಲಿ ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ ರಾಜ್ಯವಲಯ ಯೋಜನೆಯ ಲೆಕ್ಕಶೀರ್ಷಿಕೆ:2225-03-277-2-64(059) ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

M. Sumithra 28/9/2020
(ಎಂ.ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ

ಗೆ:

1. ಪ್ರಧಾನ ಮಹಾಲೇಖಪಾಲರು (ಅ ಮತ್ತು ಇ,) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಿ.ವಿ ಗೋಪುರ, ಬೆಂಗಳೂರು.
3. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು.
4. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

D/RM/2020/G.O